## ಪ್ರಧಾನ ಮಂತ್ರಿಗಳಿಲ್ಲ

ಇಂದಿನ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪ್ರಚಲಿತ ವಿದ್ಯಮಾನಗಳ ಪರಿಚಯವೇ ಇಲ್ಲ, ಬಹಳಷ್ಟು ವಿದ್ಯಾರ್ಥಿಗಳಿಗೆ ರಾಜ್ಯದ ಶಿಕ್ಷಣ ಸಚಿವರ ಹೆಸರು ಗೊತ್ತಿಲ್ಲ ಅಂತ ಪತ್ರಿಕೆಗಳಲ್ಲಿ ವರದಿಗಳು ಪ್ರಕಟವಾಗುತ್ತಿದ್ದವು. ನಾನು ಒಂಬತ್ತನೇ ತರಗತಿಗೆ ಪಾಠ ಮಾಡುತ್ತಿರುವಾಗ, 'ಸಾಮಾನ್ಯ ಜ್ಞಾನದ ಒಂದು ಪ್ರಶ್ನೆ ಕೇಳ್ತೀನಿ, ಉತ್ತರ ಗೊತ್ತಿದ್ದವರು ಕೈ ಮೇಲೆತ್ತಬೇಕು' ಎಂದು ಹೇಳಿ, 'ನಮ್ಮ ದೇಶದ ಪ್ರಧಾನ ಮಂತ್ರಿಗಳು ಯಾವ ದೇಶಕ್ಕೆ ಪ್ರವಾಸ ಕೈಗೊಂಡಿದ್ದಾರೆ?' ಎಂದೆ. ಕೂಡಲೆ ಎದ್ದು ನಿಂತ ಬೃಂದಾ, 'ನಮ್ಮ ದೇಶಕ್ಕೆ ಪ್ರಧಾನ ಮಂತ್ರಿಗಳಿಲ್ಲ, ಇರೋರು ಒಬ್ಬರೆ ಪ್ರಧಾನ ಮಂತ್ರಿ' ಎಂದಳು. ಆಕೆ ಪ್ರಶ್ನೆಯನ್ನು ಗ್ರಹಿಸಿದ ಪರಿಗೆ ಬೆರಗಾಗುವ ಸರದಿ ನನ್ನದಾಗಿತ್ತು.

**ಮಲ್ಲಿಕಾರ್ಜುನ ಸುರಧೇನುಪುರ**





## ಆಪದ್ಬಾಂಧವ!

ನಮ್ಮ ಯಡಹಳ್ಳಿಯ ಮಾದೇವ ಮಾವ ವಿನೋದದ ಮಾತುಗಳಿಗೆ ಹೆಸರುವಾಸಿ. ಒಮ್ಮೆ ಅವನು ರಾತ್ರಿ ಧಾರವಾಡದಿಂದ ತನ್ನ ಗೂಡ್ಸ್ ಗಾಡಿಯಲ್ಲಿ ಒಬ್ಬನೇ ಬರುವಾಗ ಹೊರವಲಯದಲ್ಲಿ ಅಪರಿಚಿತ ವ್ಯಕ್ತಿಯೊಬ್ಬ ಕೈ ಮಾಡಿ ಗಾಡಿ ಹತ್ತಿದ. ಅವನು ಕುಡಿದಿರುವುದು ಗೊತ್ತಾದ ಕೂಡಲೇ, 'ದೇವರ ಬಂದಂಗ ಬಂದಿ ನೋಡಪಾ ಮಾರಾಯಾ. ನನಗೂ ಕಣ್ಣ ಸರಿ ಕಾಣಿಸ್ದಿಲ್ಲಾ. ಲೈಟಿಂದೂ ಪ್ರಾಬ್ಲಮ್ ಇತ್ತು. ಜೋಡಿ ಆದಂಗ ಆತು' ಎಂದಾಗ ಆ ವ್ಯಕ್ತಿಯ ನಶೆ ಇಳಿದು, 'ಸಾವಕಾರ, ನಾ ಒಂದ ದಗದಾ ಮರತ ಬಂದೇನ್ರಿ, ಕೈ ಮುಗಿತೇನಿ, ಇಲ್ಲೇ ಇಳಸ್ರಿ... ವಾಪಸ್ ಹೋಗಬೇಕು' ಎಂದು ಹೇಳಿ, ಇಳಿದು ಓಡಿ ಹೋದನಂತೆ!

**ರವಿ ಮುನವಳ್ಳಿ**